ವರದೇಂದ್ರತೀರ್ಥಾರ್ಯ ಗುರುವರರ ಪದಯುಗ್ಮ
ಸರಸೀರುಹದಲಿ ಸತತ ನಾ ಶರಣಾದೆನು ।
ವರ ಸಮೀರಗ ಕೃಷ್ಣರಾಮ ಹಯ ಮುಖವ್ಯಾಸ
ನರಹರಿಪ್ರಿಯರಿವರು ಸಾಧುವರಪ್ರದರು ।

ರಂಗನ ಪಾದೋದಕವು ಸುಪವಿತ್ರತಮವೆಂದು
ಗಂಗೆಯನು ಶಿರದ ಮೇಲಿಟ್ಟುಕೊಂಡಿಹ ಶಿವನು ।
ಲಿಂಗ ಮೂರುತಿ ಶಿವಗೆ ಸುಪೂರ್ಣಮತಿ ಗುರುವು
ಶಂಕೆ ಇಲ್ಲ ಬ್ರಹ್ಮ ಗುರು ಶಿವ ಶಿಷ್ಯ ಕೇಳಿ ಕೇನ । ೧ ।

ರಜತ ಜಾಂಬೂನವ ತಾಮ್ರವನು ಮರಗದವ
ವಜ್ರ ಮಾಣಿಕ್ಯವನು ತನ್ನ ಗರ್ಭದಲಿ ನಿಲ್ಲಿರಿಸಿ
ದುರ್ಜನರಿಗೆ ಸುಲಭದಿ ಕಾಣಿಸದೆ ಈ ಕ್ಷೇತ್ರ
ರಾಜಿಸುತೆ ರವಿ ಸೋಮ ತಾರೆಗಳ ಜ್ಯೋತಿಯಿಂದ । । ೨ ।

ರಾಘವ ಯಾದವ ವೇಂಕಟಧಾಮ ಹನುಮ ಭೀಮ
ಈ ಗ್ರಾಮ ರಕ್ಷಣೆ ಮಾಡುತಿರೆ ಶಿವ ಜಪಿಸುವ ।
ಅಘದೂರ ಗುಣನಿಧಿ ಸಮೀರಗ ಮಹಿದಾಸ–
ನಿಗೆ ಪ್ರಿಯ ಬೃಹತಿ ಋಕ್ ಶ್ರೀವಿಷ್ಣು ಸಾಸಿರನಾಮ । ೩ ।

ಈರೀತಿ ಬಹಿರ್ ಮುಖರ್ಗೆ ಪ್ರಿಯ ಲಿಂಗಸುಗೂರಲ್ಲಿ
ಸುರವೃಂದದವರು ಮರುದ್ಗಣದವರು ತೋರಿ ।
ಇರುತ್ತಿದ್ದ ಕಾಲದಿ ವಿಜ್ಞಾನ ಭಕ್ತಿ ಯೋಗೀಶ
ವರದೇಂದ್ರ ತೀರ್ಥ ಗುರುರಾಜ್ ವಿಜಯ ಮಾಡಿದರು । ೪ ।

ಜಗನ್ನಾಥದಾಸರ ಸಖ ಶಿಷ್ಯರಾಗಿಹ ನಮ್ಮ
ಜಗಖ್ಯಾತ ಪ್ರಾಣೇಶದಾಸರು ಶ್ರೀ ಸ್ವಾಮಿಗಳಿಗೆ ।
ಸ್ವಾಗತ ವಿನಯ ಪೂರ್ವಕ ನೀಡಲು ಮುದದಿಂದ
ಶ್ರೀಗಳು ತಮ್ಮ ದಿಗ್ವಿಜಯ ತಾತ್ಪರ್ಯ ಹೇಳಿದರು । ೫ ।

ತಮ್ಮ ದ್ವಿತೀಯ ಸವನ ಮಧ್ಯ ಬ್ಯಾಗವಟ್ಟಿ ನರ–
ಸಿಂಹದಾಸರ ಯುವ ಆಟೋಪ ವಿಯಾವಾನ್ ಸುಗುಣಿ
ಶ್ರೀ ಮಧ್ವ ಬಾದರಾಯಣಿ ಪರ ವಿದ್ಯಾಗ್ರಂಥಗಳ
ತಮ್ಮಲ್ಲಿ ಸಂಯುಕ್ ಓದಿ ಈಗಲೂ ಬರುವ ಆಗಾಗ । ೬ ।

ಈ ತಮ್ಮ ಪ್ರಿಯ ಶ್ರೀನಿವಾಸಾಚಾರ್ಯರ ಪ್ರೀತಿಪಾತ್ರ
ಸಾತ್ವಿಕ ಶಿಷ್ಯರಲ್ಲಿ ಶ್ರೀಮಠ ಬಂದದ್ದು ಸರಿಯೇ ।
ಇಂದಿಲ್ಲಿ ರಾಮ ವೇದವ್ಯಾಸ ಪೂಜೆ ಚರಿಸುವುದು
ಮುಂದಿಲ್ಲಿ ತತ್ತ್ವವಾದ ಸಜ್ಞಾನ ವೃದ್ಧಿಯಾಗೆ ಹೇತು । ೭ ।

ಪಾದಪೂಜೆ ಸಭ್ಯರಿಂದಲಿ ಗುರುಮರ್ಯಾದೆಗಳು
ಇಂಥ ಕಾರ್ಯಗಳ ನಿಮಿತ್ತ ವರದೇಂದ್ರ ಗುರುವು ।
ಮತ್ತು ಪೇಳುವ ಮಾತು ಪೂಜಾನಂತರ ಎನ್ನುತಲೆ
ಬಂದು ನೆರೆದ ಜನರಲಿ ಗಮನ ಬೀರಿದರು । ೮ ।

ಲಿಂಗಸುಗೂರು ಮತ್ತು ಸುತ್ತಮುತ್ತ ಗ್ರಾಮಜನರ
ಕಂಗಳಿಗೆ ಹಬ್ಬವು ಮನಸ್ಸಿಗಾನಂದಕರವು ।
ಬಂಗಾರ ನವರತ್ನ ಮಂಟಪದಿ ಯತಿಕೃತ್ ಪೂಜೆ
ಶೃಂಗಾರ ದೀಪಾವಳಿ ತೋರಣ ವಿಪ್ರಜನ ಗುಂಪು । ೯ ।

ಮನೋದಾರ ವಾಕ್ಚತುರ ಶ್ರದ್ಧಾಳು ಭಕ್ತಿಭರಿತ
ಪ್ರಾಣೇಶದಾಸಾರ್ಯರ ಸೇವೆ ಮೆಚ್ಚಿದರು ಶ್ರೀಗಳು ।
ಅನಪೇಕ್ಷರು ಸ್ವಯಂ ತಾನೇ ವದಾನ್ಯರು ಕೇಳ್ದರು
ಮನೆ ಸ್ಥಳ ತಮಗೆ ದಾನಮಾಡೆಂದು ದಾಸರನ್ನ । ೧೦ ।

ಜ್ಞಾನಿವರ ಪ್ರಾಣೇಶದಾಸರಾಯರು ಎಂಥ ಭಾಗ್ಯ
ಎನ್ನುತ ಅನವಶ್ಯ ಹೆಚ್ಚು ಸೊಲ್ಲು ವೆಚ್ಚ ಮಾಡದೇ ।
ದಾನ ಮಾಡಿದರು ರಾಮಕೃಷ್ಣ ವ್ಯಾಸಾರ್ಪಣೆವೆಂದು
ಕನಿಕರದಿ ಸ್ವೀಕರಿಸಬೇಕೆಂದು ಬೇಡಿದರು । ೧೧ ।

ಜ್ಞಾನಿಕುಲ ತಿಲಕರು ದೇವಸ್ವಭಾವರು ನಮ್ಮ
ಘೃಣಿ ಶ್ರೀವರದೇಂದ್ರತೀರ್ಥಾರ್ಯ ಗುರುಮಹಂತರು ।
ದಾನ ಸ್ವೀಕರಿಸಿ ಬಹ್ವನುಗ್ರಹಿಸಿ ಹೊರಟರು
ಇನ್ನುಳಿದ ತಮ್ಮ ವಿಜಯ ಯಾತ್ರೆ ಕ್ಷೇತ್ರಗಳಿಗೆ । ೧೨ ॥

"ಶ್ರದ್ಧಯಾಧೇಯಂ' ಎಂಬ ಶಾಸನಾನುಸಾರ
ಈ ದಾನ ದಾಸರು ಮಾಡಿದ್ದು ಲೋಕ ಕೊಂಡಾಡುತಿದೆ ।
ಅಂದಿನಾರಭ್ಯ ಲಿಂಗಸುಗೂರು ಪ್ರಾಣೇಶದಾಸರ

ಮಂದಿರ ವ್ಯಾಸದಾಸ ತತ್ವವಾದ ಪೋಷಕವಾಯ್ತು ॥ ೧೩ ॥

ಶ್ರೀ ಮಠದ ಆಡಳಿತ ಪಾಠ ಪ್ರವಚನ ಇಂಥ
ತಮ್ಮ ಸ್ಥಾನಾಶ್ರಮ ಕೆಲಸ ಮಾಡುತ ಬಹುದಿನ ।
ತಮಗೆ ದತ್ತವಾದ ಲಿಂಗಸುಗೂರು ಭೂಮಿಯನ್ನು
ಸುಮ್ಮನೆ ಖಾಲಿಯಾಗಿ ಇಟ್ಟು ಪುಣೆಯಲ್ಲಿ ಗುರು ನಿಂತರು ॥ ೧೪ ॥

ನಿಯಮೇನ ಹರಿಪುರಯ್ದೈದಿ ಪುಣೆ ಮಠದಲಿ
ದಿವ್ಯ ವೃಂದಾವನಸ್ಥರಾಗಿ ದಾಸರಿಗೆ ಸ್ವಪ್ನದಿ ।
ದಯಪಾಲಿಸಿದರು ತುಳಸಿ ವೃಕ್ಷ ಕುರುಹಲ್ಲಿ
ಶ್ರೀಯಃ ಪತಿಯ ಧ್ಯಾನಿಸುತ ಬಂದಿಹೆವು ವಾಸಕ್ಕೆ ॥ ೧೫ ॥

ಶ್ರೀ ಸ್ವಾಮಿಗಳ ಸ್ವಾಪ್ನ ಆಜ್ಞಾನುಸಾರವಾಗಿಯೇ ।
ವಿಶ್ವಾಸ ಉಕ್ಕುತ ಪ್ರಾಣೇಶದಾಸರು ವೃಂದಾವನವ ।
ಹಸನಾಗಿ ನಿರ್ಮಾಣ ಮಾಡಿ ಯೋಗ್ಯದಿನ ವಿಹಿತ
ಸಂಸ್ಕಾರದಿಂದ ಆವಾಹನ ಪ್ರತಿಷ್ಠೆ ಮಾಡಿದರು । ೧೬ ।

ಮಹಾನ್ ವರದೇಂದ್ರರು ಸ್ವಾಪ್ನ ಸಂದೇಶ ಪ್ರಕಾರವೇ
ಮಹಾನುಗ್ರಹ ಮಾಡಿ ತಾನೇ ಒಂದಂಶದಿ ಕುಳಿತು ।
ಅಹರಹ ಬಂದು ಸೇವಿಸುವರ್ಗೆ ವಾಂಛಿತವಿತ್ತು
ಸಲಹುತಲಿಹರು ಅದ್ಯಾಪಿ ಲಿಂಗಸುಗೂರಲ್ಲಿ । ೧೭ ।

ಈ ಪುಣ್ಯಶ್ಲೋಕ ವರದೇಂದ್ರತೀರ್ಥರಲಿ ತೀರ್ಥತ್ವ
ಇಪ್ಪುದರಿಂ ಪವಿತ್ರಕರ ಇವರ ಪಾದಸೇವಾ ।
ಪಾಪಹಾರಿಣಿ ಪುಣ್ಯದಾ ತುಳಸಿಯ ಮೂಲದಲಿ
ಸುಪವಿತ್ರಕರ ಸರ್ವತೀರ್ಥಗಳಿಪ್ಪುದು ಸಿದ್ಧ ॥ ೧೮ ॥

ಉರುಗಾಯ ಧನ್ವಂತರಿಯ ಆನಂದ ಭಾಷ್ಪಬಿಂದು
ಅಪ್ರಾಕೃತವಾದ್ದು ಹಸ್ತಸ್ಥ ಪ್ರಾಕೃತ ಪೀಯೂಷದೋಳ್ ।
ಪ್ರಕ್ಷಿಪ್ತವಾವಿ ಧರೆಯಲಿ ತುಳಸೀ ವೃಕ್ಷವಾಯ್ತು
ಹರಿಕೊಟ್ಟ ವರದಿಂ ವೃಂದಾದೇವಿ ತುಳಸೀಕಟ್ಟೆ ॥ ೧೯ ॥

ದೋಷೋಜ್ಜಿತ ಗುಣ ಪೂರ್ಣ ಶ್ರೀಹರಿ ತುಳಸೀನಾಮ
ಲಕ್ಷ್ಮೀಸಮೇತ ಆ ವೃಕ್ಷ ಮಧ್ಯದಿ ಅಮೃತಾಂಧಸ್ ।

ಶ್ರೇಷ್ಟರ ಸಹ ಇರುವಂತೆ ವರದೇಂದ್ರರೋಳ್ ಛಂದಸಾಂ
ವೃಷಭ ಶ್ರೀಯುಕ್ ಸಪರಿವಾರ ಜ್ವಲಿಸುತಿಹನು ॥ ೨೦ ॥

ಉತ್ತಮ ಶ್ಲೋಕ ಪರಮೈಶ್ವರ್ಯ ರೂಪ ವಿಷ್ಣುವೇ ಆಧಿ
ಅಂದರೆ ಸರ್ವೋತ್ತಮ ಇಂಥಾ ಗುಣಜ್ಞಾನ ಪುಂಜವು ।
ವೇದಗಳು ತುಳಸ್ಯಾಗ್ರದಿ ಇರುವಂತೆ ಇವರೋಳ್
ಮೇಧಾ ಪ್ರೌಢಿಮೆ ಇರುಹುದು ಮಧ್ವಸ್ಥವ್ಯಾಸಾನುಗ್ರಹ ॥ ೨೧ ॥

ಸುಮನಸ ವಂದಿತ ತುಳಸೀನಾಮಕ ಲಕ್ಷ್ಮಿಯು
ಸನ್ಮಂತ್ರವು ದ್ವಾದಸಾಕ್ಷರದಿ ಇರುವುದು ಅದು ।
ನಿರ್ಮಮ ನಿರ್ಮತ್ಸರ ಯೋಗ್ಯ ಅಧಿಕಾರಿಗಳಿಂದ
ರಮಾಧವ ಪ್ರೀತಿಗೆ ಜಪ್ಯ ಇಹಪರೇಷ್ಟಲಾಭ । ೨೨ ॥

ಬಾದರಾಯಣ ತಾನೇ ನುಡಿಸಿದೀ ನುಡಿಗಳ್ ಭಕ್ತಿ
ಯಿಂದೋದಿ ಕೇಳ್ವರ್ಗೆ ವರದೇಂದ್ರ ಮಧ್ಯಸ್ಥ ಅಜನ-
ಪಿತ ಶ್ರೀ ಪ್ರಸನ್ನ ಶ್ರೀನಿವಾಸ ಶ್ರೀಶ ತುಳಸೀಶ
ವಿತ್ತ ವಿದ್ಯಾಯುರಾರೋಗ್ಯ ಜ್ಞಾನ ಭಕ್ತ್ಯಾದಿಗಳಿಂದ ॥ ೨೩ ॥

---

वरदेंद्रतीर्थार्य गुरुवरर पदयुग्म
सरसीरुहदलि सतत ना शरणादेनु ।
वर समीरग कृष्णराम हय मुखव्यास
नरहरिप्रियरिवरु साधुवरप्रदरु ।

रंगन पादोदकवु सुपवित्रतमवॆंदु
गंगॆयनु शिरद मेलिट्टुकॊंडिह शिवनु ।
लिंग मूरुति शिवगॆ सुपूर्णमति गुरुवु
शंकॆ इल्ल ब्रह्म गुरु शिव शिष्य केळि केन । १ ।

रजत जांबूनव ताम्रवनु मरगदव

वज्र माणिक्यवनु तन्न गर्भदलि निल्लिरिसि
दुर्जनरिगॆ सुलभदि काणिसदॆ ई क्षेत्र
राजिसुतॆ रवि सोम तारॆगळ ज्योतियिंद ।      । २ ।

राघव यादव वेंकटधाम हनुम भीम
ई ग्राम रक्षणॆ माडुतिरॆ शिव जपिसुव ।
अघदूर गुणनिधि समीरग महिदास–
निगॆ प्रिय बृहति ऋक् श्रीविष्णु सासिरनाम  । ३ ।

ईरीति बहिर् मुखर्गॆ प्रिय लिंगसुगूरल्लि
सुरवृंददवरु मरुद्गणदवरु तोरि ।
इरुत्तिद्द कालदि विज्ञान भक्ति योगीश
वरदेंद्र तीर्थ गुरुराज् विजय माडिदरु     । ४ ।

जगन्नाथदासर सख शिष्यरागिह नम्म
जगख्यात प्राणेशदासरु श्री स्वामिगळिगॆ ।
स्वागत विनय पूर्वक नीडलु मुददिंद
श्रीगळु तम्म दिग्विजय तात्पर्य हेळिदरु     । ५ ।

तम्म द्वितीय सवन मध्य ब्यागवट्टि नर–
सिंहदासर युव आटोप वियावान् सुगुणि
श्री मध्व बादरायणि पर विद्याग्रंथगळ
तम्मल्लि संयुक् ओदि ईगलू बरुव आगाग ।  ६ ।

ई तम्म प्रिय श्रीनिवासाचार्यर प्रीतिपात्र
सात्विक शिष्यरल्लि श्रीमठ बंदद्दु सरियॆ ।
इंदिल्लि राम वेदव्यास पूजॆ चरिसुवुदु
मुंदिल्लि तत्त्ववाद सज्ञान वृद्धियागॆ हेतु । ७ ।

पादपूजॆ सभ्यरिंदलि गुरुमर्यादॆगळु
इंथ कार्यगळ निमित्त वरदेंद्र गुरुवु ।
मत्तु पेळुव मातु पूजानंतर ऎन्नुतलॊ
बंदु नॆरॆद जनरलि गमन बीरिदरु । ८ ।

लिंगसुगूरु मत्तु सुत्तमुत्त ग्रामजनर
कंगळिगॆ हब्बवु मनस्सिगानंदकरवु ।
बंगार नवरत्न मंटपदि यतिकृत् पूजॆ
शृंगार दीपावळि तोरण विप्रजन गुंपु । ९ ।

मनोदार वाक्चतुर श्रद्धाळु भक्तिभरित
प्राणेशदासार्यर सेवॆ मॆच्चिदरु श्रीगळु ।
अनपेक्षरु स्वयं ताने वदान्यरु केळ्दरु
मनॆ स्थळ तमगॆ दानमाडॆंदु दासरन्न । १० ।

ज्ञानिवर प्राणेशदासरायरु ऎंथ भाग्य
ऎन्नुत अनवश्य हॆच्चु सॊल्लु वॆच्च माडदॆ ।
दान माडिदरु रामकृष्ण व्यासार्पणवॆंदु
कनिकरदि स्वीकरिसबेकॆंदु बेडिदरु । ११ ।

ज्ञानिकुल तिलकरु देवस्वभावरु नम्म
घृणि श्रीवरदेंद्रतीर्थार्य गुरुमहंतरु ।
दान स्वीकरिसि बह्वनुग्रहिसि हॊरटरु
इन्नुळिद तम्म विजय यात्रॆ क्षेत्रगळिगॆ । १२ ॥

"श्रद्धयाधेयं' ऎंब शासनानुसार
ई दान दासरु माडिद्दु लोक कॊंडाडुतिदॆ ।

अंदिनारभ्य लिंगसुगूरु प्राणेशदासर
मंदिर व्यासदास तत्ववाद पोषकवाय्तु ॥ १३ ॥

श्री मठद आडळित पाठ प्रवचन इंथ
तम्म स्थानाश्रम केलस माडुत बहुदिन ।
तमगे दत्तवाद लिंगसुगूरु भूमियन्नु
सुम्मने खालियागि इट्टु पुणेयल्लि गुरु निंतरु ॥ १४ ॥

नियमेन हरिपुरयैदि पुणे मठदलि
दिव्य वृंदावनस्थरागि दासरिगे स्वप्नदि ।
दयपालिसिदरु तुळसि वृक्ष कुरुहल्लि
श्रीयः पतिय ध्यानिसुत बंदिहेवु वासक्के ॥ १५ ॥

श्री स्वामिगळ स्वाप्न आज्ञानुसारवागिये ।
विश्वास उक्कुत प्राणेशदासरु वृंदावनव ।
हसनागि निर्माण माडि योग्यदिन विहित
संस्कारदिंद आवाहन प्रतिष्ठे माडिदरु । १६ ।

महान् वरदेंद्ररु स्वाप्न संदेश प्रकारवे
महानुग्रह माडि ताने ऒंदंशदि कुळितु ।
अहरह बंदु सेविसुवर्गे वांछितवित्तु
सलहुतलिहरु अद्यापि लिंगसुगूरल्लि । १७ ।

ई पुण्यश्लोक वरदेंद्रतीर्थरलि तीर्थत्व
इप्पुदरिं पवित्रकर इवर पादसेवा ।
पापहारिणि पुण्यदा तुळसिय मूलदलि
सुपवित्रकर सर्वतीर्थगळिप्पुदु सिद्ध ॥ १८ ॥

उरुगाय धन्वंतरिय आनंद भाष्पबिंदु
अप्राकृतवाद्दु हस्तस्थ प्राकृत पीयूषदोळ् ।
प्रक्षिप्तवावि धरॆयलि तुळसी वृक्षवाय्तु
हरिकॊट्ट वरदिं वृंदादेवि तुळसीकट्टॆ ॥ १९ ॥

दोषोज्जित गुण पूर्ण श्रीहरि तुळसीनाम
लक्ष्मीसमेत आ वृक्ष मध्यदि अमृतांधस् ।
श्रेष्टर सह इरुवंतॆ वरदेंद्ररोळ् छंदसां
वृषभ श्रीयुक् सपरिवार ज्वलिसुतिहनु ॥ २० ॥

उत्तम श्लोक परमैश्वर्य रूप विष्णुवे आधि
अंदरॆ सर्वोत्तम इंथा गुणज्ञान पुंजवु ।
वेदगळु तुळस्याग्रदि इरुवंतॆ इवरोळ्
मेधा प्रौढिमॆ इरुहुदु मध्वस्थव्यासानुग्रह ॥ २१ ॥

सुमनस वंदित तुळसीनामक लक्ष्मियु
सन्मंत्रवु द्वादसाक्षरदि इरुवुदु अदु ।
निर्मम निर्मत्सर योग्य अधिकारिगळिंद
रमाधव प्रीतिगॆ जप्य इहपरेष्टलाभ । २२ ॥

बादरायण ताने नुडिसिदी नुडिगळ् भक्ति
यिंदोदि केळ्वर्गॆ वरदेंद्र मध्यस्थ अजन–
पित श्री प्रसन्न श्रीनिवास श्रीश तुळसीश
वित्त विद्यायुरारोग्य ज्ञान भक्त्यादिगळिंद ॥ २३ ॥